ನಿಮ್ಮೋದನೆ

# ಜಾಣ ಜಾಣೆಯರಿಗೆ ಮತ್ತೆ ಮತ್ತೆ ನೆನಪಿಸಿ ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’

ಹಿಜಾಬು ಮತ್ತು ಕೇಸರಿ ಶಾಲುಗಳ ನೆಪದಲ್ಲಿ ಗುಂಪುಗಳಾಗಿ ಒಡೆದಿರುವ ವಿದ್ಯಾರ್ಥಿ ಸಮುದಾಯಕ್ಕೆ ಕುವೆಂಪು ಅವರ ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ವಿಜ್ಞಾಪನೆಯನ್ನು ನೆನಪಿಸಬೇಕು. ಮತ ಭ್ರಾಂತಿಯನ್ನು ಬಿಟ್ಟು, ಮತಿಯ ದೀವಿಗೆಯನ್ನು ಹಿಡಿಯರಿ ಎನ್ನುವ ಕವಿಯ ಕರೆ ತರುಣ ತರುಣಿಯರ ಮನಸ್ಸನ್ನು ಹೊಗಬೇಕು.



ದೀರ್ಘವಾದ ದಾರಿ ಸವೆಸುವಾಗ ಮೈಮನಗಳಿಗೆ ಚೈತನ್ಯ ತುಂಬುವ ಜೀವಜಲದಂತೆ, ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸಾಹಿತ್ಯ ಪರಂಪರೆಯಲ್ಲಿನ ಕೆಲವು ಪಠ್ಯಗಳು ಯುವಜನರಿಗೆ ಒದಗಿಬರುತ್ತವೆ. ಅಂಥದೊಂದು ದೀಪಧಾರಿ ಪಠ್ಯ, ಕುವೆಂಪು ಅವರ ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ಭಾಷಣ–ಕೃತಿ.

ಕುವೆಂಪು ಅವರ ಮಾತು ಶುರುವಾಗುವುದು, ‘ಅಮೃತಪುತ್ರರಲ್ಲಿ ವಿಜ್ಞಾಪನೆ’ ಎನ್ನುವ ಮಾತಿನೊಂದಿಗೆ. ಯುವಜನತೆಯ (ವಿದ್ಯಾರ್ಥಿಗಳ) ಅಪರಿಮಿತ ಸಾಮರ್ಥ್ಯದ ಬಗ್ಗೆ ಕುವೆಂಪು ಹೊಂದಿದ್ದ ಅಪಾರ ನಂಬಿಕೆಯನ್ನು ‘ಅಮೃತಪುತ್ರರು’ ಎನ್ನುವ ಮಾತು ಸೂಚಿಸುವಂತಿದೆ. ಅಮೃತದ ಜೀವದಾಯಿನಿ ಹಾಗೂ ಅಮರತ್ವದ ಗುಣಗಳು ಯುವಶಕ್ತಿಯದೂ ಹೌದೆನ್ನುವುದನ್ನು ಕವಿ ಸೂಚಿಸುತ್ತಿರುವಂತಿದೆ.

ಯುವಕರು ‘ನಿರಂಕುಶಮತಿ’ಗಳಾಗಬೇಕು ಎನ್ನುವ ಕುವೆಂಪು – ‘ನಿರಂಕುಶಮತಿ’ ತತ್ವವನ್ನು ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ‘ನಿರಂಕುಶಮತಿ’ ಎಂದು ಸ್ಪಷ್ಟಪಡಿಸುತ್ತಾರೆ. ‘ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆದ್ದರಿಂದ, ಸಹೋದರರರೇ, ಮತಿ ನಿಮ್ಮ ನೆಚ್ಚಿನ ರನ್ನದೀವಿಗೆಯಾಗಲಿ’ ಎನ್ನುತ್ತಾರೆ.

‘ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ. ಕಾಂತಿಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ’ ಎನ್ನುವ ಕವಿ, ‘ಅಧೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು’ ಎಂದು ಯುವಮಿತ್ರರಿಗೆ ಕರೆಕೊಡುತ್ತಾರೆ.

ಮತಿಯನ್ನು ನಿಸ್ತೇಜಗೊಳಿಸಿರುವ ‘ಮತ’ದ ಬಗ್ಗೆ ಕುವೆಂಪು ಅವರು ಹೇಳಿರುವ ಮಾತುಗಳು ಕುತೂಹಲಕರವಾಗಿವೆ. ‘ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು – ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ’ ಎಂದು ಟೀಕಿಸಿದ್ದಾರೆ. ‘ಸರ್ವಮತಗಳಿಗಿಂತಲೂ ಶುದ್ಧಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು’ ಎನ್ನುವುದು ಅವರ ನಂಬಿಕೆ.

ಯುವಜನ ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗದೆ, ಸರ್ವಧರ್ಮಗಳ ಸಾರವಾದ ಉದಾರ ‘ದರ್ಶನ’ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು ಎನ್ನುವುದು ಕವಿಯ ಹಂಬಲ. ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿಯಬೇಕೆನ್ನುವುದು ನಿರೀಕ್ಷೆ. ಮತಿಯ ದೀವಿಗೆಯನ್ನು ಹಿಡಿದವರಿಗೆ ದೇವಸ್ಥಾನಗಳ ಆವಶ್ಯಕತೆ ಇರುವುದಿಲ್ಲ. ದೇವದೇವನ ಶರೀರರೂಪಿಯಾದ ಜಗತ್ತೆಲ್ಲವೂ ದೇವಸ್ಥಾನವಾಗುತ್ತದೆ ಎಂದು ಕವಿ ಒತ್ತಿಹೇಳುತ್ತಾರೆ. ಅಂತಹ ದಿವ್ಯ ‘ದರ್ಶನ’ದ ಪ್ರಾಪ್ತಿಗಾಗಿ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೇ ಕವಿ ‘ನಿರಂಕುಶಮತಿ’ ಎಂದು ಕರೆದು, ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ ‘ನಿರಂಕುಶಮತಿ’ಗಳಾಗಬೇಕು ಎಂದು ಬಯಸುತ್ತಾರೆ.

‘ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;/ ಮತಿಯಿಂದ ದುಡಿಯಿರೈ ಲೋಕಹಿತಕೆ./ ಆ ಮತದ ಈ ಮತದ ಹಳೆಮತದ ಸಹವಾಸ/ ಸಾಕಿನ್ನು ಸೇರಿರೈ ಮನುಜ ಮತಕೆ:/ ಓ, ಬನ್ನಿ, ಸೋದರರೆ, ವಿಶ್ವಪಥಕೆ!’ ಎನ್ನುವುದು ಕವಿಯ ಕರೆ. ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ಎಂದು ಅಮೃತಪುತ್ರರಲ್ಲಿ ಕವಿ ಮಾಡಿಕೊಂಡ ವಿಜ್ಞಾಪನೆ ಕೃತಿ ರೂಪದಲ್ಲಿ ಮೊದಲು ಪ್ರಕಟಗೊಂಡಿದ್ದು 1944ರಲ್ಲಿ. ಎಂಟು ದಶಕಗಳ ನಂತರವೂ ಆ ವಿಜ್ಞಾಪನೆ ಎಲ್ಲ ತಲೆಮಾರುಗಳ ಯುವಕರಿಗೂ ಪ್ರಸ್ತುತವಾಗುವಂತಿದೆ, ಮತಿಗೆ ಮಾರ್ಗ ತೋರುವಂತಿದೆ. ಹಿಜಾಬು ಮತ್ತು ಕೇಸರಿ ಶಾಲುಗಳ ನೆಪದಲ್ಲಿ ವಿದ್ಯಾರ್ಥಿ ಸಮುದಾಯ ಗುಂಪುಗಳಾಗಿ ಒಡೆದಿರುವ ಸಂದರ್ಭದಲ್ಲಿ ಕುವೆಂಪು ಅವರ ‘ನಿರಂಕುಶಮತಿಗಳಾಗಿ’ ವಿಜ್ಞಾಪನೆ ಮತ್ತೂ ಪ್ರಸ್ತುತವಾಗಿದೆ. ಮನಸ್ಸುಗಳನ್ನು ಬೆಸೆಯಬೇಕಾದವರೆಲ್ಲ ಒಡೆಯುವುದರಲ್ಲಿ ಉತ್ಸಾಹ ತೋರುತ್ತಿರುವ ಸಂದರ್ಭದಲ್ಲಿ, ಇಂಥ ಪಠ್ಯಗಳಷ್ಟೇ ನಮ್ಮ ತರುಣ ತರುಣಿಯರಿಗೆ ದಿಕ್ಕು.

■ ರಘುನಾಥ ಚ.ಹ.